**ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ** : ಮಾನ್ಯ ಅಧ್ಯಕ್ಷರೆ, ಉತ್ತರ ಇದೆ. ಆದರೆ ನನ್ನದು ಪ್ರಶ್ನೆ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನತಕ್ಕಂಥಾದ್ದು ಒಂದು. ಎಷ್ಟು ಕಾಲದಿಂದ ಖಾಲಿ ಇವೆ, ಎಷ್ಟು ಸಮಯದಲ್ಲಿ ತುಂಬುತ್ತೀರಿ ಎನ್ನತಕ್ಕಂಥಾದ್ದು ಈ ಮೂರು ಸಣ್ಣ ವಿಚಾರಕ್ಕೆ ಉತ್ತರ ಕೊಟ್ಟರೆ ಸಾಕು.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** :- ಮಾನ್ಯ ಅಧ್ಯಕ್ಷರೇ, 66 ಹುದ್ದೆಗಳು ಖಾಲಿ ಇವೆ. ಈಗಾಗಲೇ ಅದನ್ನು ತುಂಬತಕ್ಕಂಥ ಪ್ರಯತ್ನ ಕೂಡ ನಡೆಯುತ್ತಿದೆ. ಮತ್ತೆ ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಖಾಲಿ ಹುದ್ದೆಗಳನ್ನು ನೋಟಿಫೈ ಮಾಡಿ ಭರ್ತಿ ಮಾಡಿ ತೆಗೆದುಕೊಳ್ಳಲಾಗಿದೆ.

**ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ** : ಮಾನ್ಯ ಅಧ್ಯಕ್ಷರೆ, ನಾನು ಎಷ್ಟು ಸಮಯದಲ್ಲಿ ತುಂಬಲಿಕ್ಕೆ ಸಾಧ್ಯವಾಗುತ್ತದೆಂದು ನಿರ್ದಿಷ್ಟವಾಗಿ ಕೇಳಿದೆ. ಆದರೆ ಇಲ್ಲಿ ಉತ್ತರದಲ್ಲಿರತಕ್ಕಂಥಾದ್ದು ಇನ್ನೂ ನಾವು ರೀ ಸ್ಟ್ರಕ್ಚರಿಂಗ್ ಮಾಡುತ್ತಿದ್ದೇವೆ. ಆ ರಿ ಸ್ಟ್ರಕ್ಚರಿಂಗ್ ಎಲ್ಲಾ ಆದ ನಂತರ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆ ರೀ ಸ್ಟ್ರಕ್ಚರಿಂಗ್ ಮಾಡಿ ತುಂಬಲಿಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎನ್ನುವ ಪ್ರಶ್ನೆ ಅಷ್ಟೇ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ ಎಷ್ಟು ಖಾಲಿ ಹುದ್ದೆಗಳು ಇವೆ ಅವುಗಳನ್ನು ಭರ್ತಿ ಮಾಡಲಿಕ್ಕೆ ಕೆಲಸ ನಡೆಯುತ್ತಿದ್ದು 2003-04 ರಲ್ಲಿ ಬಜೆಟ್ ಭಾಷಣದಲ್ಲಿ ಹುದ್ದೆಗಳು ಕಡಿಮೆ ಮಾಡಬೇಕೆಂದು ಆಗಿದೆ. ಆದರೂ ಕೂಡ ಅವೆಲ್ಲಾ ಸಾಮಾನ್ಯ ಹುದ್ದೆಗಳು ಬೇಕಾಗುತ್ತದೆ. ಅದಕ್ಕೆ 66 ಹುದ್ದೆಗಳಿಗೆ ಭರ್ತಿ ಮಾಡತಕ್ಕಂಥ ಕೆಲಸ ಈಗಾಗಲೇ ಶುರುವಾಗಿದೆ.

**ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಮೀನುಗಾರಿಕಾ ಇಲಾಖೆಗೆ ಸ್ವಂತ ಕಟ್ಟಡ ಒದಗಿಸುವುದು**

419 (5344) ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ (ಕಲಘಟಗಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮೀನುಗಾರಿಕೆ ಇಲಾಖೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಇಲಾಖೆಗೆ ಸ್ವಂತ ಕಟ್ಟಡ ಒದಗಿಸಿಕೊಡುವಲ್ಲಿ ಸರಕಾರ ಯಾವ ಕ್ರಮ ಕೈಗೊಂಡಿದೆ.

ಇ) ಕಲಘಟಗಿ ಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು? ಖಾಲಿ ಹುದ್ದೆಗಳ ಭರ್ತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು, ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಯ 2 ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಕಲಘಟಗಿ ಕಛೇರಿಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಕ್ಷೇತ್ರ ಅಧೀಕ್ಷಕರು, ಮೀನುಮರಿ ಉತ್ಪಾದನಾ ಕೇಂದ್ರ ಸೀರಸಾಗರ ಕಛೇರಿಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆ) ಕಲಘಟಗಿಯಲ್ಲಿ ಮೀನುಗಾರಿಕೆ ಇಲಾಖೆಯು ಸ್ವಂತ ಕಟ್ಟಡ ಹೊಂದಲು ಅಗತ್ಯ ನಿವೇಶನವನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದು ನಂತರ ಸ್ವಂತ ಕಟ್ಟಡದ ವ್ಯವಸ್ಥೆ ಮಾಡಲಾಗುತ್ತದೆ.

ಇ) ಕಲಘಟಗಿ ಕ್ಷೇತ್ರದಲ್ಲಿ ಮೀನುಗಾರಿಕಾ ಇಲಾಖೆಯಲ್ಲಿ ಒಂದು ಪಾರಾ ಅಧೀಕ್ಷಕರ (ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)) ಹುದ್ದೆಮಾತ್ರ ಖಾಲಿ ಇರುತ್ತದೆ; ಈ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.

**ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ** : ಮಾನ್ಯ ಅಧ್ಯಕ್ಷರೆ, ಕಲಘಟಗಿ ಮತಕ್ಷೇತ್ರದಲ್ಲಿ ಈ ಒಂದು ಮೀನುಗಾರಿಕೆ ಇಲಾಖೆ ಕಟ್ಟಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಕಟ್ಟಡ ಇಲ್ಲ ಅಂತ ಒಪ್ಪಿಕೊಂಡಿದ್ದಾರೆ. ಎರಡನೆಯದು, ಆ ಕಟ್ಟಡವನ್ನು ತಾವು ಯಾವಾಗ ಕಟ್ಟುತ್ತೀರಿ ಎನ್ನುವಂತಹ ಮಾತನ್ನು ಕೇಳಿದ್ದೇನೆ. ಜಾಗವನ್ನು ನೋಡಿಕೊಂಡು ನಾವು ಪ್ರಯತ್ನಿಸುತ್ತೇವೆ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಮೂರನೆಯದು, ಇಲಾಖೆಯಲ್ಲಿ ಖಾಲಿ ಹುದ್ದೆಗಳ ಬಗ್ಗೆ ಕೇಳಿದ್ದೇನೆ. ಎರಡು ಹುದ್ದೆ ಖಾಲಿ ಇವೆ, ಅವುಗಳನ್ನು ತುಂಬುತ್ತೇವೆ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ,

ಮಾನ್ಯ ಅಧ್ಯಕ್ಷರೇ, ಈ ಕಟ್ಟಡವನ್ನು ಕಟ್ಟಲಿಕ್ಕೆ ತಾವು ಯಾವಾಗ ಕೆಲಸವನ್ನು ಪ್ರಾರಂಭಮಾಡುತ್ತೀರಿ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :** ಮಾನ್ಯ ಅಧ್ಯಕ್ಷರೆ, ಖಾಲಿ ಹುದ್ದೆ ಭರ್ತಿ ಮಾಡತಕ್ಕಂಥಾದ್ದು, ಕಟ್ಟಡ ಕಟ್ಟಿಸತಕ್ಕಂಥಾದ್ದು, ಬಹಳ ತೀವ್ರಗತಿಯಿಂದ ಪ್ರಾರಂಭ ಮಾಡುತ್ತೇವೆ, ಅದು ನಡೆಯುತ್ತಿದೆ, ಅದನ್ನು ಪೂರ್ಣಗೊಳಿಸುತ್ತೇವೆ.

**ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ :** ಮಾನ್ಯ ಅಧ್ಯಕ್ಷರೆ, ಈಗ ಕಲಘಟಗಿ ತಾಲ್ಲೂಕಿನಲ್ಲಿ ನೂರಾರು ಚಿಕ್ಕ ನೀರಾವರಿ ಕೆರೆಗಳು ಇವೆ. ಅನೇಕ ರೀತಿಯಿಂದ ಆ ಕೆರೆಗಳಲ್ಲಿ ಮೀನುಗಳನ್ನು ಬಿಟ್ಟು ಅನೇಕ ಜನ ಬಡ ಕುಟುಂಬದವರು ಜೀವನವನ್ನು ಸಾಗಿಸುತ್ತಿದ್ದರು. ಇತ್ತೀಚೆಗೆ ಏನಾಗಿದೆ ಅಂದರೆ ಈ ಇಲಾಖೆಯಲ್ಲಿ ಸ್ವಂತ ಕಟ್ಟಡ ಇಲ್ಲ. ಆಮೇಲೆ ಅಲ್ಲಿ ಅಧಿಕಾರಿಗಳು ಇಲ್ಲ. ಸರ್ಕಾರದಿಂದ ಬಂದಂತಹ ಯೋಜನೆಗಳನ್ನು ಅಲ್ಲಿ ಮಾಡುತ್ತಿಲ್ಲ. ಆದರೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಏನು ವಿನಂತಿ ಮಾಡಿ ಕೊಳ್ಳುತ್ತೇನೆಂದರೆ ಮೊದಲನೆಯದಾಗಿ ಅಲ್ಲಿ ಕಟ್ಟಡ ಕಟ್ಟಬೇಕು. ಅವರು ಜಾಗವನ್ನು ನಾಳೆಯೇ ಖರೀದಿ ಮಾಡಲಿ, ನಾಳಿದ್ದು ಖರೀದಿ ಮಾಡಲಿ ಎಲ್ಲಿಯಾದರೂ ಖರೀದಿ ಮಾಡಲಿ ಸ್ವಂತ ಕಟ್ಟಡ ಕಟ್ಟಬೇಕು. ಎರಡನೆಯದಾಗಿ ಎರಡು ನಿರ್ದೇಶಕರ ಹುದ್ದೆಗಳು ಅಂತ ಹೇಳಿದ್ದಾರೆ. ಅಂದರೆ ಇರುವಂತಹ ಎರಡೂ ಹುದ್ದೆಗಳು ಖಾಲಿ ಇವೆ ಅಂದರೆ ಆ ಇಲಾಖೆಯಿಂದ ಏನು ಕೆಲಸ ನಡೆಯುತ್ತದೆ ಎಂಬುದನ್ನು ದಯಮಾಡಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಧರ್ಮಸಿಂಗ್ :** ಮಾನ್ಯ ಅಧ್ಯಕ್ಷರೆ, ಕಟ್ಟಡ ಪೋಡು ಮಾಡತಕ್ಕಂಥಾದ್ದನ್ನು ಮಾಡುತ್ತಿದ್ದೇವೆ. ಅಲ್ಲಿ ಇರತಕ್ಕಂಥಾದ್ದು 29 ಹುದ್ದೆಗಳು. 21 ಹುದ್ದೆ ಭರ್ತಿ ಮಾಡಿದ್ದೇವೆ. ಮೀನುಗಾರಿಕಾ ಸಹಾಯಕ ನಿರ್ದೇಶಕರ ಹುದ್ದೆ 2002 ರಿಂದ ಖಾಲಿ ಇದ್ದುದ್ದನ್ನು ಮೊನ್ನೆ ಮಾರ್ಚಿಯಲ್ಲಿ ಅದನ್ನು ಭರ್ತಿ ಮಾಡಿದ್ದೇವೆ. ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ, ಕಟ್ಟಡ ಕೂಡ ಪ್ರಾರಂಭಮಾಡಿ ಅದನ್ನು ಮುಗಿಸುತ್ತೇವೆ.

ಪ್ರಶ್ನೆ ಸಂಖ್ಯೆ : 420 (4435)
(ಮಾನ್ಯ ಸದಸ್ಯರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ)

**ಅಧ್ಯಕ್ಷರು** : ಮಾನ್ಯ ರವಿಯವರೇ, ನಿಮ್ಮ ಪ್ರಶ್ನೆಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದೆ. ಅರಣ್ಯ ಇಲಾಖೆ ಮಂತ್ರಿಗಳಿಂದ ಮುಂದಿನವಾರ ಅಂದರೆ ಮಂಗಳವಾರ ಅವರ ಪ್ರಶ್ನೆಗಳು ಇವೆ ಅವತ್ತು ಉತ್ತರ ಕೊಡಿಸೋಣ.

**ಬೆಂಗಳೂರು ನಗರದಲ್ಲಿ ಧರಣಿ ಮುಷ್ಕರ, ಮೆರವಣಿಗೆಗಳಿಂದ ಟ್ರಾಫಿಕ್ ಜಾಮ್**

409 (4945) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಧರಣಿ, ಮುಷ್ಕರ, ಮೆರವಣಿಗೆ ಮುಂತಾದ ಕಾರಣಗಳಿಂದ ಪ್ರತಿನಿತ್ಯ ಟ್ರಾಫಿಕ್‌ಜಾಮ್ ಆಗಿ ನಗರದ ಜನತೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಟ್ರಾಫಿಕ್ ಜಾಮ್‌ನಿಂದಾಗಿ ಅಧಿಕವಾಗುತ್ತಿರುವ ವಾಯುಮಾಲಿನ್ಯ ಹಾಗೂ ತತ್ಪರಿಣಾಮವಾಗಿ ಅಸ್ತಮ ಮುಂತಾದ ಅಲರ್ಜಿಕಾರಕ ರೋಗಗಳು ಹೆಚ್ಚುತ್ತಿರುವುದು ನಿಜವಲ್ಲವೆ?

ಇ) ಈ ರೀತಿ ಧರಣಿ, ಸತ್ಯಾಗ್ರಹ ನಡೆಸುವವರಿಗೆ ನಗರದಿಂದ 20 ಕಿ.ಮಿ. ಆಚೆ ಒಂದು ಮೈದಾನವನ್ನು ಅಭಿವೃದ್ಧಿಪಡಿಸಿ, ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರಿಂದ ಟ್ರಾಫಿಕ್ ಜಾಮ್ ತೊಂದರೆ ಕಡಿಮೆಯಾಗುವುದಿಲ್ಲವೆ?

ಈ) ಹಾಗಿದ್ದಲ್ಲಿ ನಗರದ 20 ಕಿ.ಮಿ. ವ್ಯಾಪ್ತಿಯಲ್ಲಿ ಧರಣಿ, ಮುಷ್ಕರ, ಮೆರವಣಿಗೆ ಇತ್ಯಾದಿಗಳನ್ನು ನಿಷೇಧಿಸಲು ಸರ್ಕಾರ ಕಾನೂನನ್ನು ರೂಪಿಸುವುದೇ?

ಉ) ಈ ಬಗ್ಗೆ ಸರ್ಕಾರದ ಮುಂದಿರುವ ಕಾರ್ಯಯೋಜನೆಗಳೇನು?